**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಪಟ್ಟಣ</u>**

**ಉಪಸ್ಥಿತರು: ಶ್ರೀಮತಿ ಉಷಾರಾಣಿ ಬಿ.ಎನ್,** ಬಿ.ಎ ಎಲ್‌ಎಲ್.ಬಿ.,ಎಲ್.ಎಲ್.ಎಂ.,
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**<u>ದಿನಾಂಕ: 3 ನೇ ಜುಲೈ 2023</u>**

**<u>ಅಸಲು ದಾವಾ ಸಂಖ್ಯೆ.240/2014</u>**

**ವಾದಿಗಳು** : ಶ್ರೀಮತಿ ಸುವರ್ಣಮ್ಮ

-ವಿರುದ್ಧ -

**ಪ್ರತಿವಾದಿಗಳು** : ಶ್ರೀ ಶಿವಲಿಂಗಯ್ಯ ಮತ್ತು ಇತರರು

**<u>ಮದ್ಯಂತರ ಅರ್ಜಿ ಸಂಖ್ಯೆ-12</u>**

**ಅರ್ಜಿದಾರರು/ವಾದಿಗಳು** : ಶ್ರೀಮತಿ ಸುವರ್ಣಮ್ಮ

**(ಪ್ರತಿನಿಧಿಸುವವರು ಶ್ರೀ.ಎಸ್ ಎಸ್ ಜಿ ವಕೀಲರು)**

**-- ವಿರುದ್ಧ --**

**ಎದುರುದಾರರು/**
**ಪ್ರತಿವಾದಿಗಳು** : ಶ್ರೀ ಶಿವಲಿಂಗಯ್ಯ ಮತ್ತು ಇತರರು

**(ಪ್ರತಿನಿಧಿಸುವವರು ಶ್ರೀ.ಎಂ ಕೆ ಎನ್ /ಟಿ ಎನ್ ಆರ್., ವಕೀಲರು)**

**<u>ಮಧ್ಯಂತರ ಅರ್ಜಿ ಸಂಖ್ಯೆ: 12 ರ ಮೇಲಿನ ಆದೇಶ:</u>**

ಮಾನ್ಯ ಪ್ರತಿವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 12 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ ಲಿಖಿತ ತಕರಾರಿನಲ್ಲಿ ಕೋರಿರುವಂತೆ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಪ್ರಸ್ತುತ ಅರ್ಜಿಯನ್ನು ಪ್ರತಿವಾದಿಗಳು ಪ್ರತಿವಾದಿಗಳ ಸಾಕ್ಷಿ ವಿಚಾರಣೆಗೆ ಇರುವ ಸಮಯದಲ್ಲಿ ಸಲ್ಲಿಸಿರುತ್ತಾರೆ.

**<u>ಉದ್ದೇಶಿತ ತಿದ್ದುಪಡಿ</u>**

ಸದರಿ ಲಿಖಿತ ತಕರಾರಿನ ಪುಟ 3, 12 ನೇ ಪ್ಯಾರಾದ ನಂತರ 12(ಎ) ಪ್ಯಾರಾದಲ್ಲಿ ದಾವಾ ಐಟಂ 2 ಸರ್ವೆ ನಂಬರ್ 2/6 ರ ಸ್ವತ್ತು ಒಟ್ಟು ವಿಸ್ತೀರ್ಣ 21 ಗುಂಟೆಯಾಗಿರುತ್ತದೆ. ಸದರಿ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ವಾದಿಯ ಮಾವ ಮೊಡ್ಡಲಿಂಗೇಗೌಡ ಮತ್ತು 1 ನೇ ಪ್ರತಿವಾದಿಯ ತಂದೆ ಮಂಚೇಗೌಡ ಹಾಗೂ ರಾಜೇಗೌಡರವರುಗಳು ದಿನಾಂಕಃ10.06.1990 ರಲ್ಲಿ ವಿಭಾಗ ಮಾಡಿಕೊಂಡಿದ್ದು ಅದರಂತೆ 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ 2 ನೇ ದಾವಾ ಐಟಂನಲ್ಲಿ ಕಟ್ಟಿರುವ ಪೂರ್ವ-ಪಶ್ಚಿಮ 33 ಅಡಿಗಳು ಉತ್ತರ-ದಕ್ಷಿಣ 73 ಅಡಿಗಳು ಸೀಮೆ ಹೆಂಚಿನ ಮನೆ ಮತ್ತು ಅದಕ್ಕೆ ಲಗತ್ತಾಗಿ ಉತ್ತರಕ್ಕೆ ಇರುವ ಹಿತ್ತಲು ಪೂರ್ವ -ಪಶ್ಚಿಮ 33 ಅಡಿಗಳು ಉತ್ತರ-ದಕ್ಷಿಣ 48 ಅಡಿಗಳು 1 ನೇ ಪ್ರತಿವಾದಿಯ ತಾತಾ ಮಂಚೇಗೌಡ ನ ಭಾಗಕ್ಕೆ ಬಂದಿರುತ್ತದೆ. ಸದರಿ ಒಟ್ಟು ಮನೆ ಮತ್ತು ಹಿತ್ತಲಿಗೆ ಚೆಕ್ಕುಬಂಧಿ ಪೂರ್ವಕ್ಕೆ -ಬೆಳ್ಳುಪೇಗೌಡರ ಮನೆ, ಪಶ್ಚಿಮಕ್ಕೆ -ಸಿದ್ದಪ್ಪಾಜಿ ಮತ್ತು ಜಯ್ಯಮ್ಮನವರ ಮನೆ, ದಕ್ಷಿಣಕ್ಕೆ-ರಸ್ತೆ, ಉತ್ತರಕ್ಕೆ -ರಸ್ತೆ, ಮತ್ತು 4 ನೇ ಪ್ರತಿವಾದಿ ಗಂಗಮ್ಮನವರ ಮನೆ ಇರುತ್ತದೆ. 2 ನೇ ದಾವಾ ಐಟಂ ಸ್ವತ್ತನ್ನು ಕಣದ ಹೊಲ ಎಂದು ಕರೆಯುತ್ತಿದ್ದು, ಸದರಿ ಜಮೀನಿನಲ್ಲಿ 4 ನೇ ಪ್ರತಿವಾದಿ ಮತ್ತು ವಾದಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು ಇನ್ನುಳಿದ ಸ್ವತ್ತಿನಲ್ಲಿ 1 ರಿಂದ 3 ನೇ ಪ್ರತಿವಾದಿಗಳುವ್ಯವಸಾಯ ಮಾಡುತ್ತಿರುತ್ತಾರೆ. ಸರ್ವೆ ನಂಬರ್ 2/6 ರಲ್ಲಿ 1 ರಿಂದ 3 ನೇ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿರುವ ಸ್ವತ್ತಿಗೆ ಚೆಕ್ಕುಬಂಧಿ ಪೂರ್ವಕ್ಕೆ -ಬೆಳ್ಳುಪೇಗೌಡ ಜಮೀನು. ಪಶ್ಚಿಮಕ್ಕೆ-ಸಿದ್ಧಪ್ಪಾಜಿರವರ ಜಮೀನು ಉತ್ತರಕ್ಕೆ ಸಿದ್ದಪ್ಪಾಜಿರವರ ಜಮೀನು , ದಕ್ಷಿಣಕ್ಕೆ-ಸುವರ್ಣಮ್ಮನವರ ಮನೆ ಅಂದರೇ ವಾದಿಯ ಮನೆ ಸದರಿ ಜಮೀನಿನಲ್ಲಿ ಮನೆ ಕಟ್ಟುವ ಸಲುವಾಗಿ 1 ರಿಂದ 3 ನೇ ಪ್ರತಿ ವಾದಿಗಳು ಇಟ್ಟಿಗೆ ಗೂಡನ್ನು ಹಾಕಿಸಿರುತ್ತಾರೆ. ವಾದಿ ದಾವ ಐಟಂ-2 ಸರ್ವೆ ನಂಬರ್ 2/6 ರಲ್ಲಿ ಕಟ್ಟಿಸಿರುವ ಮನೆ ಹೊರತುಪಡಿಸಿ ಯಾವುದೇ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ವಿಭಾಗ ಪತ್ರದಂತೆ ವಾದಿಯ ಮಾವನ ಭಾಗಕ್ಕೆ ಸೇರಿರುವುದಿಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ ವಿಭಾಗದ ಮೂಲಕ ಬಂದ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ದಾವಾ ಸ್ವತ್ತುಗಳ ಖಾತೆ 1 ನೇ ಪ್ರತಿವಾಯ ತಾತ ಲಿಂಗೇಗೌಡ ಬಿನ್

**ಮಂಚೇಗೌಡನ ಹೆಸರಿನಲ್ಲಿ ದಾಖಲಾಗಿರುತ್ತವೆ. ವಾದಿಯ ಮಾವ ಮೊಡ್ಡೇಲಿಂಗೇಗೌಡನಿಗೆ ಪ್ರತ್ಯೇಕವಾಗಿ ಬೇರೆ ಸ್ವತ್ತುಗಳು ವಿಭಾಗದ ಮೂಲಕ ಬಂದು ಅವರ ಹೆಸರಿಗೆ ಖಾತೆಯಾಗಿದ್ದು ನಂತರ ವಾದಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತವೆ. ಸದರಿ ಸ್ವತ್ತುಗಳಲ್ಲಿ ವಾದಿ ಸ್ವಾಧೀನಾನುಭವದಲ್ಲಿರುತ್ತಾರೆ. ದಾವ ಸ್ವತ್ತುಗಳಿಗೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ, ದಾವಾ ಆಸ್ತಿಗಳಲ್ಲಿ ವಾದಿ ಎಂದಿಗೂ ಸ್ವಾಧೀನಾನು ಭವದಲ್ಲಿರುವುದಿಲ್ಲ ಮತ್ತು ಅವುಗಳಲ್ಲಿ ರೀತಿಯ ಯಾವುದೇ ಹಕ್ಕು ಅಧಿಕಾರವನ್ನಾಗಲೀ ಹೊಂದಿರುವುದಿಲ್ಲ ಎಂಬುದನ್ನು ಸೇರಿಸುವುದು.**

2. 3 ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ಸದರಿ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಮತ್ತು ಶಾಶ್ವತ ತಡೆಯಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದು, ತಾನು , 1 ಮತ್ತು 2 ನೇ ಪ್ರತಿವಾದಿ ಮೂವರು ಸದರಿ ದಾವೆಗೆ ಸಂಬಂಧಿಸಿದಂತೆ ಲಿಖಿತ ತಕರಾರು ಸಲ್ಲಿಸುವಾಗ ಕೈ ತಪ್ಪಿನಿಂದಾಗಿ ಸದರಿ ಲಿಖಿತ ತಕರಾರಿನ ಪುಟ 3, 12 ನೇ ಪ್ಯಾರದ ನಂತರ 12(ಎ) ಪ್ಯಾರಾದಲ್ಲಿ ದಾವಾ ಐಟಂ 2 ಸರ್ವೆ ನ ಂಬರ್ 2/6 ರ ಸ್ವತ್ತು ಒಟ್ಟು ವಿಸ್ತೀರ್ಣ 21 ಗುಂಟೆಯಾಗಿರುತ್ತದೆ. ಸದರಿ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ವಾದಿಯ ಮಾವ ಮೊಡ್ಡೆಲಿಂಗೇಗೌಡ ಮತ್ತು 1 ನೇ ಪ್ರತಿವಾದಿಯ ತಂದೆ ಮಂಚೇಗೌಡ ಹಾಗೂ ರಾಜೇಗೌಡರವರುಗಳು ದಿನಾಂಕಃ10.06.1990 ರಲ್ಲಿ ವಿಭಾಗ ಮಾಡಿಕೊಂಡಿದ್ದು ಅದರಂತೆ 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ 2 ನೇ ದಾವಾ ಐಟಂ ನಲ್ಲಿ ಕಟ್ಟಿರುವ ಪೂರ್ವ ಪಶ್ಚಿಮ 33 ಅಡಿಗಳು, ಉತ್ತರ ದಕ್ಷಿಣ 73 ಅಡಿಗಳು ಸೀಮೆ ಹೆಂಚಿನ ಮನೆ ಮತ್ತು ಅದಕ್ಕೆ ಲಗತ್ತಾಗಿ ಉತ್ತರಕ್ಕೆ ಇರುವ ಹಿತ್ತಲು ಪೂರ್ವ ಪಶ್ಚಿಮ 33 ಅಡಿಗಳು , ಉತ್ತರ ದಕ್ಷಿಣ 48 ಅಡಿಗಳು 1 ನೇ ಪ್ರತಿವಾದಿಯ ತಾತಾ ಮಂಚೇಗೌಡನ ಭಾಗಕ್ಕೆ ಬಂದಿರುತ್ತದೆ. ಸದರಿ ಒಟ್ಟು ಮನೆ ಮತ್ತು ಹಿತ್ತಲಿಗೆ ಚೆಕ್ಕುಬಂದಿ ಪೂರ್ವಕ್ಕೆ - ಬೆಳ್ಳುಪೇಗೌಡರ ಮನೆ, ಪಶ್ಚಿಮಕ್ಕೆ ಸಿದ್ದಪ್ಪಾಜಿ ಮತ್ತು ಜಯಮ್ಮನವರ ಮನೆ, ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ರಸ್ತೆ ಮತ್ತು 4 ನೇ ಪ್ರತಿವಾದಿ ಗಂಗಮ್ಮನವರ ಮನೆ ಇರುತ್ತದೆ. 2 ನೇ ದಾವಾ ಐಟಂ ಸ್ವತ್ತನ್ನು ಕಣ ಹೊಲ ಎಂದು ಕರೆಯುತ್ತಿದ್ದು, ಸದರಿ ಜಮೀನಿನಲ್ಲಿ 4 ನೇ ಪ್ರತಿವಾದಿ ಮತ್ತು ವಾದಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು ಇನ್ನುಳಿದ ಸ್ವತ್ತಿನಲ್ಲಿ 1 ರಿಂದ 3 ನೇ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿರುತ್ತಾರೆ. ಸರ್ವೆ ನಂಬರ್ 2/6 ರಲ್ಲಿ 1 ರಿಂಕದ 3 ನೇ ಪ್ರತಿವಾದಿಗಳು ವ್ಯವಸಾಯ

ಮಾಡುತ್ತಿರುವ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ - ಬೆಳ್ಳುಪೇಗೌಡರ ಮನೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಸಿದ್ದಪ್ಪಾಜಿರವರ ಜಮೀನು, ದಕ್ಷಿಣಕ್ಕೆ ಸುವರ್ಣಮ್ಮನವರ ಮನೆ ಅಂದರೆ ವಾದಿಯ ಮನೆ ಸದರಿ ಜಮೀನಿನಲ್ಲಿ ಮನೆ ಕಟ್ಟುವ ಸಲುವಾಗಿ 1 ರಿಂದ 3 ನೇ ಪ್ರತಿವಾದಿಗಳು ಇಟ್ಟಿಗೆ ಗೂಡನ್ನು ಹಾಕಿಸಿರುತ್ತಾರೆ. ವಾದಿ ದಾವಾ ಐಟಂ 2 ಸರ್ವೆ ನಂಬರ್ 2/6 ರಲ್ಲಿ ಕಟ್ಟಿಸಿರುವ ಮನೆ ಹೊರತುಪಡಿಸಿ ಯಾವುದೇ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ವಿಭಾಗ ಪತ್ರದಂತೆ ವಾದಿಯ ಮಾವನ ಭಾಗಕ್ಕೆ ಸೇರಿರುವುದಿಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ ವಿಭಾಗದ ಮೂಲಕ ಬಂದ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ದಾವಾ ಸ್ವತ್ತುಗಳ ಖಾತೆ 1 ನೇ ಪ್ರತಿವಾದಿಯ ತಾತಾ ಲಿಂಗೇಗೌಡ ಬಿನ್ ಮಂಚೇಗೌಡನ ಹೆಸರಿನಲ್ಲಿ ದಾಖಲಾಗಿರುತ್ತದೆ. ವಾದಿಯ ಮಾವ ಮೊಡ್ಡೆ ಲಿಂಗೇಗೌಡನಿಗೆ ಪ್ರತ್ಯೇಕವಾಗಿ ಬೇರೆ ಸ್ವತ್ತುಗಳು ವಿಭಾಗದ ಮೂಲಕ ಬಂದು ಅವರ ಹೆಸರಿಗೆ ಖಾತೆಯಾಗಿದ್ದು ನಂತರ ವಾದಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ. ಸದರಿ ಸ್ವತ್ತುಗಳಲ್ಲಿ ವಾದಿ ಸ್ವಾಧೀನಾನುವದಲ್ಲಿರುತ್ತಾರೆ. ದಾವಾ ಸ್ವತ್ತುಗಳಿಗೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಎಂದಿಗೂ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ಅವುಗಳಲ್ಲಿ ಯಾವುದೇ ರೀತಿಯ ಹಕ್ಕು ಅಧಿಕಾವನ್ನಾಗಲೀ ಹೊಂದಿರುವುದಿಲ್ಲ ಎಂಬುದನ್ನು ಸೇರಿಸಿರುವುದಿಲ್ಲ . ಸದರಿ ವಿಚಾರವನ್ನು ನಮ್ಮ ಪರ ಈಗಾಗಲೇ ಸಲ್ಲಿಸಿರುವ ಲಿಖಿತ ತಕರಾರಿನಲ್ಲಿ ಹೇಳಿರುವುದಿಲ್ಲ.ಮೇಲ್ಕಂಡ ವಿಚಾರವು ದಾವೆಯಲ್ಲಿ ನನ್ನ ಪರವಾಗಿ ಪ್ರತಿರಕ್ಷೆಯನ್ನು ತೆಗೆದುಕೊಳ್ಳಲು ಸೇರಿಸುವುದು ತೀರಾ ಅವಶ್ಯಕವಾಗಿದ್ದು, ಆದ ಕಾರಣ ಸದರಿ ದಾವೆಯ ಲಿಖಿತ ತಕರಾರಿನಲ್ಲಿ ಮೇಲ್ಕಂಡ ವಿಷಯಗಳನ್ನು ಸೇರಿಸುವಂತೆ ನಾನು ನಮ್ಮ ವಕೀಲರಿಗೆ ತಿಳುವಳಿಕೆ ನೀಡಿರುತ್ತೇನೆ. ಸದರಿ ವಿಚಾರಗಳು ಬಿಟ್ಟು ಹೋಗಿರುವ ವಿಚಾರ ನಾನು ಹಿಂದಿನ ದಿನಾಂಕಂದಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುವ ಸಮಯದಲ್ಲಿ ನನ್ನ ಗಮನಕ್ಕೆ ಬಂದಿದ್ದು ತಕ್ಷಣ ನಮ್ಮ ವಕೀಲರಿಗೆ ತಿಳಿಸಿ ತಿದ್ದುಪಡಿಯನ್ನು ಮಾಡಲು ಸದರಿ ಅರ್ಜಿಯನ್ನು ಸಲ್ಲಿಸುತ್ತಿರುತ್ತೇನೆ. ದಾವಾ ಸ್ವತ್ತುಗಳ ಖಾತೆ ನನ್ನ ಹೆಸರಿನಲ್ಲಿ ದಾಖಲಾಗಿದ್ದು ಅವುಗಳು ನನಗೆ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ. ಅರ್ಜಿಯನ್ನು ಪುರಸ್ಕರಿಸುವುದರಿಂದ ವಾದಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅದರೆ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತನ್ನ ಹಕ್ಕಿಗೆ ನಷ್ಟವಾಗುವ ಸಂದರ್ಭ ಇರುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿ ಸಂಖ್ಯೆಃ12 ನ್ನು ಪುರಸ್ಕರಿಸಿ ಲಿಖಿತ ತಕರಾರನ್ನು ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

3. ಮಾನ್ಯ ವಾದಿಗಳ ಪರ ವಕೀಲರು ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು

ಸಲ್ಲಿಸಿದ್ದು, ಅದರಲ್ಲಿ, ವಾದಿಯರು ಸಲ್ಲಿಸಿದ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಮುಂದುವರೆದು ತಮ್ಮ ಲಿಖಿತ ಹೇಳಿಕೆಯಲ್ಲಿ ಹೊಸ ಅಂಶಗಳನ್ನು ಸೇರಿಸಿ ಲಿಖಿತ ವಾದ ಪತ್ರವನ್ನು ತಿದ್ದುಪಡಿ ಮಾಡಿ ಸೇರಿಸಬೇಕೆಂದು ಕೋರಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯದ ಸಮಯವನ್ನು ಹಾಳು ಮಾಡುವ ಉದ್ದೇಶದಿಂದ ಹಾಗೂ ಈ ವಾದಿಗೆ ಸುಮಾರು 70 ವರ್ಷ ವಯಸ್ಸಾಗಿದ್ದು ಸದರಿ ವಾದಿಯು ದಾವಾ ಸ್ವತ್ತಿನ ಮಾಲೀಕಳು ಹಾಗೂ ಹಕ್ಕುದಾರಳು ಎಂದು ಗೊತ್ತಿದ್ದರೂ ವಾದಿಗೆ ತೊಂದರೆ ಕೊಡುವ ಸಲುವಾಗಿ ಸುಮಾರು 9 ವರ್ಷಗಳ ನಂತರ ಈ ಮಧ್ಯಂತರ ಅರ್ಜಿ ಸಲ್ಲಿಸಿರುವುದು ಕಾನೂನಿನಡಿ ಊರ್ಜಿತವಾಗತಕ್ಕದಲ್ಲ. 1 ನೇ ಪ್ರತಿವಾದಿಗಳು ವಿಚಾರಣೆ ಮತ್ತು ಅಡ್ಡ ವಿಚಾರಣೆ ನಡೆದಿದ್ದು, ಪ್ರತಿವಾದಿ 1 ರವರನ್ನು ಮುಂದುವರಿದ ಅಡ್ಡ ವಿಚಾರಣೆ ಮಾಡದೇ ನ್ಯಾಯಾಲಯದ ಗಮನವನ್ನು ಬೇರೆಡೆ ಸೆಳೆಯಲು ಹಾಗೂ ಕಾಲಹರಣ ಮಾಡುವ ಸಲುವಾಗಿ ಈ ಮಧ್ಯಂತರ ಅರ್ಜಿ ಸಲ್ಲಿಸಿರುವುದು ಕಾನೂನಿನಡೆ ಊರ್ಜಿತವಾಗತಕ್ಕದ್ದಲ್ಲ. ಆರಂಭದ ಹಂತದಲ್ಲೇ ಈ ಅರ್ಜಿಯು ವಜಾಗೊಳ್ಳಲು ಯೋಗ್ಯವಾಗಿರುತ್ತದೆ. ವಾದಿಯ ಮಾವನವರಿಗೆ ಅಂದರೆ ಲೇ. ಮೊಡ್ಡೆಲಿಂಗೇಗೌಡರವರಿಗೆ ಸದರಿ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ವಾದಿಯ ಗಂಡನಾದ ಕರೀಗೌಡ ಉಃ ರಾಜೇಗೌಡರವರು ಮೃತಪಟ್ಟ ಕಾರಣ ದೊಡ್ಡಲಿಂಗೇಗೌಡರವರು ತಮ್ಮ ಸೊಸೆಗೆ ಪಂಚಾಯಿತಿ ಪಾರಿಕತ್ ಮೂಲಕ ಸರ್ವೆ ನಂ.2/2 ರಲ್ಲಿ 0.22 ಗುಂಟೆ ಮತ್ತು ಸರ್ವೆ ನಂ.2/6 ರಲ್ಲಿ 0.21 ಗುಂಟೆ ಜಮೀನನ್ನು ಪಂಚಾಯತ್ ಪಾರಿಕತ್ ಮುಖಾಂತರ ತಮ್ಮ ಸೊಸೆಗೆ ನೀಡಿದರು. ಈಗಾಗಲೇ ಸದರಿ ದಾವೆಯ ವಾದಿಯಾದ ಸುವರ್ಣಮ್ಮ ಕೋಂ ಲೇ. ಕರೀಗೌಡ ಉಃ ರಾಜೇಗೌಡ ನವರಿಗೆ ಖಾತಾ , ಪಹಣಿಯೂ ಸಹ ಇದ್ದು ಎಂ ಆರ್ ಸಂ ಃ 26/1995-96 ನೇ ಸಾಲಿನಲ್ಲಿ ಮ್ಯುಟೇಷನ್ ಸಹ ಸೇರಿದ್ದು ಅಂದಿನಿಂದ ಇಂದಿನವರೆಗೆ ಸಹ ಸದರಿ ವಾದಿಯೇ ಸ್ವಾಧೀನಾನುಭವದಲ್ಲಿದ್ದು ಅನುಭವಿಸಿಕೊಂಡು ಬರುತ್ತಿದ್ದು, ದಾಖಲೆಗಳನ್ನು ನ್ಯಾಯಾಲಯ್ಕ ಹಾಜರುಪಡಿಸಿ ನಿಪಿ5 ರಿಂದ 11 ರಂತೆ ಗುರ್ತಿಸಲಾಗಿದೆ. ಮುಂದುವರಿದು ಪ್ರತಿವಾದಿಗಳು ಈಗ ಕೋರುತ್ತಿರುವ ತಿದ್ದುಪಡಿ ವಿಷಯವನ್ನು ಈ ಮೊದಲೇ ಏಕೆ ಹೇಳಿರುವುದಿಲ್ಲ ಎಂದು ತಮ್ಮ ಅರ್ಜಿಯಲ್ಲಿ ಸ್ಪಷ್ಟವಾದ ಕಾರಣವನ್ನು ತಿಳಿಸಿರುವುದಿಲ್ಲ ಈ ಎಲ್ಲಾ ಕಾರಣಗಳಿಂದ ಈ ಮಧ್ಯಂತರ ಅರ್ಜಿಯನ್ನು ಅತಿ ಹೆಚ್ಚು ಖರ್ಚು ಸಮೇತ ವಜಾಗೊಳಿಸಬೇಕೆಂದು ಹಾಗೂ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇಲ್ಲದ ಕಾರಣ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ12 ನ್ನು

ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃಅಂಶಗಳುಃ**

1. **ಮಧ್ಯಂತರ ಅರ್ಜಿ ಸಂಖ್ಯೆಃ ಪುರಸ್ಕಾರಗೊಳ್ಳಲು ಯೋಗ್ಯವಾಗಿದೆಯೇ?**
2. **ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**ಕಾರಣಗಳು**

7. **ಅಂಶ ಸಂಖ್ಯೆಃ1ಃ** ವಾದಿಗಳು ಪ್ರತಿವಾದಿಗಳ ವಿರುದ್ದ ಈ ದಾವೆಯನ್ನು ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಸದರಿ ಲಿಖಿತ ತಕರಾರಿನ ಪುಟ 3, 12 ನೇ ಪ್ಯಾರಾದ ನಂತರ 12(ಎ) ಪ್ಯಾರಾದಲ್ಲಿ ದಾವಾ ಐಟಂ 2 ಸರ್ವೆ ನಂಬರ್ 2/6 ರ ಸ್ವತ್ತು ಒಟ್ಟು ವಿಸ್ತೀರ್ಣ 21 ಗುಂಟೆಯಾಗಿರುತ್ತದೆ. ಸದರಿ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ವಾದಿಯ ಮಾವ ಮೊಡ್ಡಲಿಂಗೇಗೌಡ ಮತ್ತು 1 ನೇ ಪ್ರತಿವಾದಿಯ ತಂದೆ ಮಂಚೇಗೌಡ ಹಾಗೂ ರಾಜೇಗೌಡರವರುಗಳು ದಿನಾಂಕಃ10.06.1990 ರಲ್ಲಿ ವಿಭಾಗ ಮಾಡಿಕೊಂಡಿದ್ದು ಅದರಂತೆ 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ 2 ನೇ ದಾವಾ ಐಟಂನಲ್ಲಿ ಕಟ್ಟಿರುವ ಪೂರ್ವ-ಪಶ್ಚಿಮ 33 ಅಡಿಗಳು ಉತ್ತರ-ದಕ್ಷಿಣ 73 ಅಡಿಗಳು ಸೀಮೆ ಹೆಂಚಿನ ಮನೆ ಮತ್ತು ಅದಕ್ಕೆ ಲಗತ್ತಾಗಿ ಉತ್ತರಕ್ಕೆ ಇರುವ ಹಿತ್ತಲು ಪೂರ್ವ -ಪಶ್ಚಿಮ 33 ಅಡಿಗಳು ಉತ್ತರ-ದಕ್ಷಿಣ 48 ಅಡಿಗಳು 1 ನೇ ಪ್ರತಿವಾದಿಯ ತಾತಾ ಮಂಚೇಗೌಡ ನ ಭಾಗಕ್ಕೆ ಬಂದಿರುತ್ತದೆ. ಸದರಿ ಒಟ್ಟು ಮನೆ ಮತ್ತು ಹಿತ್ತಲಿಗೆ ಚೆಕ್ಕುಬಂಧಿ ಪೂರ್ವಕ್ಕೆ -ಬೆಳ್ಳುಪೇಗೌಡರ ಮನೆ, ಪಶ್ಚಿಮಕ್ಕೆ -ಸಿದ್ದಪ್ಪಾಜಿ ಮತ್ತು ಜಯ್ಯಮ್ಮನವರ ಮನೆ, ದಕ್ಷಿಣಕ್ಕೆ-ರಸ್ತೆ, ಉತ್ತರಕ್ಕೆ -ರಸ್ತೆ, ಮತ್ತು 4 ನೇ ಪ್ರತಿವಾದಿ ಗಂಗಮ್ಮನವರ ಮನೆ ಇರುತ್ತದೆ.

2 ನೇ ದಾವಾ ಐಟಂ ಸ್ವತ್ತನ್ನು ಕಣದ ಹೊಲ ಎಂದು ಕರೆಯುತ್ತಿದ್ದು, ಸದರಿ ಜಮೀನಿನಲ್ಲಿ 4 ನೇ ಪ್ರತಿವಾದಿ ಮತ್ತು ವಾದಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದು ಇನ್ನುಳಿದ ಸ್ವತ್ತಿನಲ್ಲಿ 1 ರಿಂದ 3 ನೇ ಪ್ರತಿವಾದಿಗಳುವ್ಯವಸಾಯ ಮಾಡುತ್ತಿರುತ್ತಾರೆ. ಸರ್ವೆ ನಂಬರ್ 2/6 ರಲ್ಲಿ 1 ರಿಂದ 3 ನೇ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿರುವ ಸ್ವತ್ತಿಗೆ ಚೆಕ್ಕುಬಂಧಿ ಪೂರ್ವಕ್ಕೆ -ಬೆಳ್ಳುಪೇಗೌಡ ಜಮೀನು. ಪಶ್ಚಿಮಕ್ಕೆ-ಸಿದ್ಧಪ್ಪಾಜಿರವರ ಜಮೀನು ಉತ್ತರಕ್ಕೆ ಸಿದ್ದಪ್ಪಾಜಿರವರ ಜಮೀನು , ದಕ್ಷಿಣಕ್ಕೆ-ಸುವರ್ಣಮ್ಮನವರ ಮನೆ ಅಂದರೇ ವಾದಿಯ ಮನೆ ಸದರಿ ಜಮೀನಿನಲ್ಲಿ ಮನೆ ಕಟ್ಟುವ ಸಲುವಾಗಿ 1 ರಿಂದ 3 ನೇ ಪ್ರತಿ ವಾದಿಗಳು ಇಟ್ಟಿಗೆ ಗೂಡನ್ನು ಹಾಕಿಸಿರುತ್ತಾರೆ. ವಾದಿ ದಾವ ಐಟಂ-2 ಸರ್ವೆ ನಂಬರ್ 2/6 ರಲ್ಲಿ ಕಟ್ಟಿಸಿರುವ ಮನೆ ಹೊರತುಪಡಿಸಿ ಯಾವುದೇ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ವಿಭಾಗ ಪತ್ರದಂತೆ ವಾದಿಯ ಮಾವನ ಭಾಗಕ್ಕೆ ಸೇರಿರುವುದಿಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಾತ ಮಂಚೇಗೌಡನಿಗೆ ವಿಭಾಗದ ಮೂಲಕ ಬಂದ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ದಾವಾ ಸ್ವತ್ತುಗಳ ಖಾತೆ 1 ನೇ ಪ್ರತಿವಾಯ ತಾತ ಲಿಂಗೇಗೌಡ ಬಿನ್ ಮಂಚೇಗೌಡನ ಹೆಸರಿನಲ್ಲಿ ದಾಖಲಾಗಿರುತ್ತವೆ. ವಾದಿಯ ಮಾವ ಮೊಡ್ಡೇಲಿಂಗೇಗೌಡನಿಗೆ ಪ್ರತ್ಯೇಕವಾಗಿ ಬೇರೆ ಸ್ವತ್ತುಗಳು ವಿಭಾಗದ ಮೂಲಕ ಬಂದು ಅವರ ಹೆಸರಿಗೆ ಖಾತೆಯಾಗಿದ್ದು ನಂತರ ವಾದಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತವೆ. ಸದರಿ ಸ್ವತ್ತುಗಳಲ್ಲಿ ವಾದಿ ಸ್ವಾಧೀನಾನುಭವದಲ್ಲಿರುತ್ತಾರೆ. ದಾವ ಸ್ವತ್ತುಗಳಿಗೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ, ದಾವಾ ಆಸ್ತಿಗಳಲ್ಲಿ ವಾದಿ ಎಂದಿಗೂ ಸ್ವಾಧೀನಾನು ಭವದಲ್ಲಿರುವುದಿಲ್ಲ ಮತ್ತು ಅವುಗಳಲ್ಲಿ ರೀತಿಯ ಯಾವುದೇ ಹಕ್ಕು ಅಧಿಕಾರವನ್ನಾಗಲೀ ಹೊಂದಿರುವುದಿಲ್ಲ ಎಂಬುದನ್ನು ಸೇರಿಸುವುದು. ಆದ್ದರಿಂದ ಲಿಖಿತ ತಕರಾರನ್ನು ತಿದ್ದುಪಡಿಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಪ್ರತಿವಾದಿಯರು ಸದರಿ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿ, ಈ ಅರ್ಜಿಯು ಊರ್ಜಿತವಾಗಿಲ್ಲದೇ ಇರುವ ಕಾರಣ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

8. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದಿಯರು ಉದ್ದೇಶಪೂರ್ವಕವಾಗಿ ಹಾಗೂ ದುರುದ್ದೇಶದಿಂದ ದಾವೆ ಸಲ್ಲಿಸಿದ್ದು, ಅದರಲ್ಲಿ, ವಾದಿಯರು ಸಲ್ಲಿಸಿದ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

9. ಈ ದಾವೆಯಲ್ಲಿ ಪಕ್ಷಗಾರರ ವಿಚಾರಣೆಯು ಪ್ರಾರಂಭವಾಗಿದ್ದರೂ ಪ್ರಸ್ತಾಪಿತ ತಿದ್ದುಪಡಿಯು ಯಾವುದೇ ಹೊಸ ಸಂಗತಿಗಳನ್ನು ಹೊರತರುವುದಿಲ್ಲ. ಅದೇ ರೀತಿ ದಾವೆಯ ಸ್ವರೂಪವಾಗಲೀ, ಅಥವಾ ವ್ಯಾಜ್ಯ ಕಾರಣವಾಗಲೀ, ಬದಲಾವಣೆಯಾಗುವುದಿಲ್ಲ. ಪ್ರಸ್ತಾಪಿತ ತಿದ್ದುಪಡಿಯಿಂದ ವಾದಿಗಳ ಪ್ರತಿರಕ್ಷೆಗೆ ಯಾವುದೇ ದಕ್ಕೆಯಾಗುವುದಿಲ್ಲ. ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ಪ್ರತಿವಾದಿಯರಿಗೆ ಅವರ ಹಕ್ಕಿಗೆ ನಷ್ಟವುಂಟಾಗುವ ಸಾಧ್ಯತೆಯಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿ ಸಂಖ್ಯೆ:12 ನ್ನು ಪುರಸ್ಕಾರಗೊಳ್ಳಲು ಯೋಗ್ಯವಾಗಿರುತ್ತದೆ. ಅರ್ಜಿಯನ್ನು ಸಲ್ಲಿಸಲು ಮಾಡಿರುವ ಈ ವಿಳಂಬವನ್ನು ವೆಚ್ಚವನ್ನು ಹಾಕುವ ಮೂಲಕ ಸರಿದೂಗಿಸಬೇಕಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು **ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

10. **ಅಂಶ ಸಂಖ್ಯೆ:2:-** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: XII ನ್ನು ರೂ.1000/- ಖರ್ಚಿನ ಸಹಿತ ಪುರಸ್ಕರಿಸಲಾಗಿದೆ.**

**ಮಧ್ಯಂತರ ಅರ್ಜಿಸಂಖ್ಯೆ:XII ರಲ್ಲಿ ಕೋರಿರುವಂತೆ ಲಿಖಿತ ತಕರಾರನ್ನು ತಿದ್ದುಪಡಿಮಾಡಲು ಪ್ರತಿವಾದಿಗಳಿಗೆ ಅನುಮತಿ ನೀಡಲಾಗಿದೆ.**

(ಬೆರಳಚ್ಚು ನಕಲುಗಾರರಿಗೆ ತೀರ್ಪನ್ನು ನೇರವಾಗಿ ಉಕ್ತಲೇಖನ ನೀಡಿದ್ದು, ಅವರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ನಂತರ ಅದನ್ನು ಪರಿಶೀಲಿಸಿ, ಸಹಿಯನ್ನು ಮಾಡಿ ಈ ದಿನ 3 ನೇ ಜುಲೈ **- 2023** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**

ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ
(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)

**:: ಆದೇಶ ::**

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ XII ನ್ನು ರೂ.1000/- ಖರ್ಚಿನ ಸಹಿತ ಪುರಸ್ಕರಿಸಲಾಗಿದೆ.**

**ಮಧ್ಯಂತರ ಅರ್ಜಿಸಂಖ್ಯೆಃXII ರಲ್ಲಿ ಕೋರಿರುವಂತೆ ಲಿಖಿತ ತಕರಾರನ್ನು ತಿದ್ದುಪಡಿಮಾಡಲು ಪ್ರತಿವಾದಿಗಳಿಗೆ ಅನುಮತಿ ನೀಡಲಾಗಿದೆ.**

**Call on 11.07.2023.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್?ಸಿ., ಚನ್ನಪಟ್ಟಣ.**